ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೦ Volume - 160	ಬೆಂಗಳೂರು, ಬುಧವಾರ ೧೯, ನವೆಂಬರ್, ೨೦೨೫ (ಕಾರ್ತಿಕಾ, ೨೮, ಶಕವರ್ಷ, ೧೯೪೭) BENGALURU, WEDNESDAY 19, NOVEMBER, 2025 (KARTHIKA, 28, SHAKAVARSHA, 1947)	ಸಂಚಿಕೆ ೨೧೯ Issue 219

ಭಾಗ ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಆಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು

GOVERNMENT OF KARNATAKA

No.:RC-CFS0ADMN/325/2025
E-1870614

Karnataka Government Secretariat
Multi Storied Building
Bengaluru 560001
Date:17-11-2025

FINAL NOTIFICATION

Whereas the draft of the Notification **No.:RC-CFS0ADMN/325/2025, Dated: 18-08-2025** regarding altering the limits of **Sangogi** village of **Indi** Taluk in **Vijayapur** District and constituting a new revenue sub village called as **Yallaling Nagar** sub village was published as required by section 6 of the Karnataka Land Revenue Act, 1964 (Karnataka act No.12 of 1964) in the Karnataka Gazette **Dated:30-08-2025** inviting objections or suggestions from all the persons likely to be affected thereby within thirty days from the date of its publication in the Official Gazette addressed to the Deputy Commissioner **Vijayapur** district.

And whereas, the said gazette was made available to the public on **Dated: 31-08-2025;** And whereas, no objections and suggestions have been received;

Now, therefore, in exercise of the powers conferred by section 5 of Karnataka Land Revenue Act, 1964 (Karnataka act No.12 of 1964) the Government of Karnataka here by makes the following notification, namely:-

SCHEDULE

Land bearing survey numbers and extent specified below in column(3) of the table shall be declared as habitation area of **Yallaling Nagar** village of **Indi** Taluk in **Vijayapur** District convert the same to form hamlet with in the boundary of **Sangogi** revenue village and same will here in after be named as called **Yallaling Nagar** of **Sangogi** village in **Indi** Taluk of **Vijayapur** District.

TABLE

Name of the revenue village in Which unrecorded habitation is located	New name of the unrecorded habitation	Survey number	Total extent			Boundaries			
			(4)			(5)			
			Acre	Gunta	Ana	East	West	North	South
(1)	(2)	(3)							
Sangogi	Yallaling Nagar	1	6	3	0	Road	Stream	S.No 2 S.No 3	S.No 191
		190	8	16	0	Gramatan, S.No 170	Stream, S.No 189	S.No 1	Road
Total extent of unrecorded habitation			**14**	**19**	**0**				

It is hereby declared that the extent of land indicated in the columns(4) above with survey numbers specified in column (3) on which the said unrecorded habitation located is converted as habitation area(Gramatana) of **Yallaling Nagar** hamlet/part of **Sangogi** village in **Indi** Taluk of **Vijayapur** District.

The proposal specified above issued under section 5 of the Karnataka Land Revenue Act, 1964 (Karnataka Act No. 12 of 1964) shall come into effect from the date of final notification.

By order in the name of the
Governor of Karnataka

(Maruthi M.P)
Director,
Cell for creation of revenue villages
and Ex-officio Additional Secretary to Govt.
Revenue Department

ಕರ್ನಾಟಕ ಸರ್ಕಾರ

No.:RC-CFS0ADMN/325/2025
ಇ– 1870614

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು 560001
ದಿನಾಂಕ:17–11–2025

ಅಂತಿಮ ಅಧಿಸೂಚನೆ

ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ (1964 ರ ಕರ್ನಾಟಕ ಅಧಿನಿಯಮ 12) 6ನೇ ಪ್ರಕರಣದಲ್ಲಿ ಅಗತ್ಯ ಪಡಿಸಲಾದಂತೆ **ವಿಜಯಪುರ** ಜಿಲ್ಲೆಯ **ಇಂಡಿ** ತಾಲ್ಲೂಕಿನ **ಸಂಗೋಗಿ** ಗ್ರಾಮದ ಸರಹದ್ದುಗಳನ್ನು ಮಾರ್ಪಡಿಸಲು ಮತ್ತು ಹೊಸದಾಗಿ **ಯಲ್ಲಾಲಿಂಗನಗರ** ಎಂಬ ಉಪ ಗ್ರಾಮವನ್ನು ಸ್ಥಾಪಿಸುವ ಕುರಿತು ಸಂಖ್ಯೆ: **No.:RC-CFS0ADMN/325/2025, ದಿನಾಂಕ: 18-08-2025** ರ ಮೂಲಕ ಕರಡು ಅಧಿಸೂಚನೆಯನ್ನು ಅದರಿಂದ ಬಾಧಿತರಾಗ ಬಹುದಾದ ಎಲ್ಲ ವ್ಯಕ್ತಿಗಳಿಂದ ಅದನ್ನು ಸರ್ಕಾರಿರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಆಕ್ಷೇಪಣೆಗಳು ಅಥವಾ ಸಲಹೆಗಳನ್ನು ಆಹ್ವಾನಿಸಿ, **ದಿನಾಂಕ:30-08-2025** ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿರುವುದರಿಂದ,

ಮತ್ತು ಸದರಿ ರಾಜ್ಯಪತ್ರವನ್ನು ಸಾರ್ವಜನಿಕರಿಗೆ **ದಿನಾಂಕ:–31-08-2025** ರಿಂದ ಲಭ್ಯವಾಗುವಂತೆ ಮಾಡಿರುವುದರಿಂದ; ಹಾಗೂ ಆಕ್ಷೇಪಣೆಗಳು ಮತ್ತು ಸಲಹೆಗಳು ಸ್ವೀಕೃತವಾಗದೇ ಇರುವುದರಿಂದ;

ಈಗ ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ (1964 ರ ಕರ್ನಾಟಕ ಅಧಿನಿಯಮ 12) 5ನೇ ಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಮುಂದಿನ ಅಧಿಸೂಚನೆಯನ್ನು ಮಾಡುತ್ತಿದೆ, ಎಂದರೆ:–

ಅನುಸೂಚಿ

ಕೋಷ್ಟಕದ (3) ನೇ ಕಾಲಂನಲ್ಲಿ ನಿರ್ದಿಷ್ಟಪಡಿಸಿರುವ ಸರ್ವೆ ನಂಬರುಗಳು ಹಾಗೂ ವಿಸ್ತೀರ್ಣದ ಜಮೀನುಗಳನ್ನು ಹೊಂದಿರುವ **ವಿಜಯಪುರ** ಜಿಲ್ಲೆಯ **ಇಂಡಿ** ತಾಲ್ಲೂಕಿನ **ಯಲ್ಲಾಲಿಂಗನಗರ** ಗ್ರಾಮದ ಜನವಸತಿ ಪ್ರದೇಶವೆಂದು ಘೋಷಿಸತಕ್ಕದ್ದು, ಮತ್ತು ಅದನ್ನು **ಸಂಗೋಗಿ** ಕಂದಾಯ ಗ್ರಾಮದ ಸರಹದ್ದಿನೊಳಗೆ ಸಣ್ಣ ವಸತಿ ಸಮೂಹ ವ್ಯಾಪ್ತಿಯನ್ನು ರಚಿಸಲು ಪರಿವರ್ತಿಸತಕ್ಕದ್ದು ಹಾಗೂ ಅದನ್ನು ಇನ್ನು ಮುಂದೆ **ವಿಜಯಪುರ** ಜಿಲ್ಲೆಯ **ಇಂಡಿ** ತಾಲ್ಲೂಕಿನ **ಯಲ್ಲಾಲಿಂಗನಗರ** ಉಪ ಗ್ರಾಮ ಎಂಬುದಾಗಿ ಹೆಸರಿಸತಕ್ಕದ್ದು,

ಕೋಷ್ಟಕ

ದಾಖಲಾಗದ ಜನವಸತಿ ಇರುವ ಕಂದಾಯ ಗ್ರಾಮ/ ಗ್ರಾಮಗಳ ಹೆಸರು	ದಾಖಲಾಗದ ಜನವಸತಿಯ ಈಗಿನ ಹೆಸರು	ಅದು ಇರುವಂಥ ಸರ್ವೆ ನಂಬರುಗಳು	ಅದು ಇರುವಂಥ ಭೂಮಿಯ ಒಟ್ಟು ವ್ಯಾಪ್ತಿ			ಸರಹದ್ದುಗಳು			
(1)	(2)	(3)	(4)			(5)			
			ಎಕರೆ	ಗುಂಟೆ	ಆಣೆ	ಪೂರ್ವಕ್ಕೆ	ಪಶ್ಚಿಮಕ್ಕೆ	ಉತ್ತರಕ್ಕೆ	ದಕ್ಷಿಣಕ್ಕೆ
ಸಂಗೋಗಿ	ಯಲ್ಲಾಲಿಂಗನಗರ	1	6	3	0	ರಸ್ತೆ	ಹಳ್ಳ	ಸ.ನಂ 2 ಸ.ನಂ 3	ಸ.ನಂ 191
		190	8	16	0	ಗ್ರಾಮಠಾಣ ಸ.ನಂ 170	ಹಳ್ಳ ಸ.ನಂ 189	ಸ.ನಂ 1	ರಸ್ತೆ
ಜನವಸತಿ ಪ್ರದೇಶದ ಒಟ್ಟು ವಿಸ್ತೀರ್ಣ			14	19	0				

(3) ನೇ ಕಾಲಂನಲ್ಲಿ ನಿರ್ದಿಷ್ಟಪಡಿಸಿದ ಸರ್ವೆ ನಂಬರುಗಳೊಂದಿಗೆ ಮೇಲಿನ (4) ನೇ ಕಾಲಂನಲ್ಲಿ ಸೂಚಿಸಿರುವ ಭೂಮಿಯ ವ್ಯಾಪ್ತಿಯಲ್ಲಿ ಇರುವ ದಾಖಲಾಗದ ಜನವಸತಿಯನ್ನು **ವಿಜಯಪುರ** ಜಿಲ್ಲೆಯ **ಇಂಡಿ** ತಾಲ್ಲೂಕಿನ **ಸಂಗೋಗಿ** ಗ್ರಾಮದ **ಯಲ್ಲಾಲಿಂಗನಗರ** ಸಣ್ಣ ವಸತಿ ಸಮೂಹ ಭಾಗದ ಜನವಸತಿ ಪ್ರದೇಶ(ಗ್ರಾಮಠಾಣಾ) ಎಂಬುದಾಗಿ ಪರಿವರ್ತಿಸಲಾಗಿದೆ ಎಂದು ಈ ಮೂಲಕ ಘೋಷಿಸಿದೆ.

ಮೇಲೆ ನಿರ್ದಿಷ್ಟಪಡಿಸಿದ ಪ್ರಸ್ತಾವನೆಯು, ಕರ್ನಾಟಕ ಭೂಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 12) 5ನೇ ಪ್ರಕರಣದಡಿ ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟವಾದ ಅಂತಿಮ ಅಧಿಸೂಚನೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಾರುತಿ ಎಂ.ಪಿ)
ನಿರ್ದೇಶಕರು,
ಕಂದಾಯ ಗ್ರಾಮಗಳ ರಚನಾ ಕೋಶ
ಹಾಗೂ ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ
ಕಂದಾಯ ಇಲಾಖೆ.

PR-1755

GOVERNMENT OF KARNATAKA

No.:RC-CFS0ADMN/65/2025
E-1805837

Karnataka Government Secretariat
Multi Storied Building
Bengaluru 560001
Date:17-11-2025

FINAL NOTIFICATION

Whereas the draft of the Notification **No.:RC-CFS0ADMN/65/2025, Dated: 14-07-2025** regarding altering the limits of **Krishnapura** village of **Savanur** Taluk in **Haveri** District and constituting a new revenue sub village called as **Raghavendra Nagar** sub village was published as required by section 6 of the Karnataka Land Revenue Act, 1964 (Karnataka act No.12 of 1964) in the Karnataka **Gazette Dated:17-07-2025** inviting objections or suggestions from all the persons likely to be affected thereby within thirty days from the date of its publication in the Official Gazette addressed to the Deputy Commissioner **Haveri** district.

And whereas, the said gazette was made available to the public on **Dated: 18-07-2025;** And whereas, no objections and suggestions have been received;

Now, therefore, in exercise of the powers conferred by section 5 of Karnataka Land Revenue Act, 1964 (Karnataka act No.12 of 1964) the Government of Karnataka here by makes the following notification, namely:-

SCHEDULE

Land bearing survey numbers and extent specified below in column(3) of the table shall be declared as habitation area of **Raghavendra Nagar** village of **Savanur** Taluk in **Haveri** District convert the same to form hamlet with in the boundary of **Krishnapura** revenue village and same will here in after be named as called **Raghavendra Nagar** of **Krishnapura** village in **Savanur** Taluk of **Haveri** District.

TABLE

Name of the revenue village in Which unrecorded habitation is located	**New name of the unrecorded habitation**	**Survey number**	**Total extent**			**Boundaries**			
(1)	**(2)**	**(3)**	**(4)**			**(5)**			
Krishnapura	**Raghavendra Nagar**		**Acre**	**Gunta**	**Ana**	**North**	**South**	**East**	**West**
		57 pyki	12	0	0	Sno 63,61	Sno 50, 64, 65	Sno 62,64	Pyki land of Sno 57
Total extent of unrecorded habitation			**12**	**0**	**0**				

It is hereby declared that the extent of land indicated in the columns(4) above with survey numbers specified in column (3) on which the said unrecorded habitation located is converted as habitation area(Gramatana) of **Raghavendra Nagar** hamlet/part of **Krishnapura** village in **Savanur** Taluk of **Haveri** District.

The proposal specified above issued under section 5 of the Karnataka Land Revenue Act, 1964 (Karnataka Act No. 12 of 1964) shall come into effect from the date of final notification.

By order in the name of the
Governor of Karnataka

(Maruthi M.P)
Director,
Cell for creation of revenue villages
and Ex-officio Additional Secretary to Govt.
Revenue Department

ಕರ್ನಾಟಕ ಸರ್ಕಾರ

No.:RC-CFS0ADMN/65/2025
ಇ– 1805837

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು 560001
ದಿನಾಂಕ:17–11–2025

ಅಂತಿಮ ಅಧಿಸೂಚನೆ

ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ (1964 ರ ಕರ್ನಾಟಕ ಅಧಿನಿಯಮ 12) 6 ನೇ ಪ್ರಕರಣದಲ್ಲಿ ಅಗತ್ಯ ಪಡಿಸಲಾದಂತೆ **ಹಾವೇರಿ** ಜಿಲ್ಲೆಯ **ಸವಣೂರು** ತಾಲ್ಲೂಕಿನ **ಕೃಷ್ಣಾಪುರ** ಗ್ರಾಮದ ಸರಹದ್ದುಗಳನ್ನು ಮಾರ್ಪಡಿಸಲು ಮತ್ತು ಹೊಸದಾಗಿ **ರಾಘವೇಂದ್ರ ನಗರ** ಎಂಬ ಉಪ ಗ್ರಾಮವನ್ನು ಸ್ಥಾಪಿಸುವ ಕುರಿತು ಸಂಖ್ಯೆ: **No.:RC-CFS0ADMN/65/2025, ದಿನಾಂಕ: 14-07-2025** ರ ಮೂಲಕ ಕರಡು ಅಧಿಸೂಚನೆಯನ್ನು ಅದರಿಂದ ಬಾಧಿತರಾಗ ಬಹುದಾದ ಎಲ್ಲ ವ್ಯಕ್ತಿಗಳಿಂದ ಅದನ್ನು ಸರ್ಕಾರಿರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಆಕ್ಷೇಪಣೆಗಳು ಅಥವಾ ಸಲಹೆಗಳನ್ನು ಆಹ್ವಾನಿಸಿ, **ದಿನಾಂಕ:17-07-2025** ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿರುವುದರಿಂದ,

ಮತ್ತು ಸದರಿ ರಾಜ್ಯಪತ್ರವನ್ನು ಸಾರ್ವಜನಿಕರಿಗೆ **ದಿನಾಂಕ:–18-07-2025** ರಿಂದ ಲಭ್ಯವಾಗುವಂತೆ ಮಾಡಿರುವುದರಿಂದ; ಹಾಗೂ ಆಕ್ಷೇಪಣೆಗಳು ಮತ್ತು ಸಲಹೆಗಳು ಸ್ವೀಕೃತವಾಗದೇ ಇರುವುದರಿಂದ;

ಈಗ ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ (1964 ರ ಕರ್ನಾಟಕ ಅಧಿನಿಯಮ 12) 5ನೇ ಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಮುಂದಿನ ಅಧಿಸೂಚನೆಯನ್ನು ಮಾಡುತ್ತಿದೆ, ಎಂದರೆ:–

ಅನುಸೂಚಿ

ಕೋಷ್ಟಕದ (3) ನೇ ಕಾಲಂನಲ್ಲಿ ನಿರ್ದಿಷ್ಟಪಡಿಸಿರುವ ಸರ್ವೆ ನಂಬರುಗಳು ಹಾಗೂ ವಿಸ್ತೀರ್ಣದ ಜಮೀನುಗಳನ್ನು ಹೊಂದಿರುವ **ಹಾವೇರಿ** ಜಿಲ್ಲೆಯ **ಸವಣೂರು** ತಾಲ್ಲೂಕಿನ **ರಾಘವೇಂದ್ರ ನಗರ** ಗ್ರಾಮದ ಜನವಸತಿ ಪ್ರದೇಶವೆಂದು ಘೋಷಿಸತಕ್ಕದ್ದು, ಮತ್ತು ಅದನ್ನು **ಕೃಷ್ಣಾಪುರ** ಕಂದಾಯ ಗ್ರಾಮದ ಸರಹದ್ದಿನೊಳಗೆ ಸಣ್ಣ ವಸತಿ ಸಮೂಹ ವ್ಯಾಪ್ತಿಯನ್ನು ರಚಿಸಲು ಪರಿವರ್ತಿಸತಕ್ಕದ್ದು ಹಾಗೂ ಅದನ್ನು ಇನ್ನು ಮುಂದೆ **ಹಾವೇರಿ** ಜಿಲ್ಲೆಯ **ಸವಣೂರು** ತಾಲ್ಲೂಕಿನ **ರಾಘವೇಂದ್ರ ನಗರ** ಉಪ ಗ್ರಾಮ ಎಂಬುದಾಗಿ ಹೆಸರಿಸತಕ್ಕದ್ದು,

ಕೋಷ್ಟಕ

ದಾಖಲಾಗದ ಜನವಸತಿ ಇರುವ ಕಂದಾಯ ಗ್ರಾಮ/ ಗ್ರಾಮಗಳ ಹೆಸರು	ದಾಖಲಾಗದ ಜನವಸತಿಯ ಈಗಿನ ಹೆಸರು	ಅದು ಇರುವಂಥ ಸರ್ವೆ ನಂಬರುಗಳು	ಅದು ಇರುವಂಥ ಭೂಮಿಯ ಒಟ್ಟು ವ್ಯಾಪ್ತಿ			ಸರಹದ್ದುಗಳು			
(1)	(2)	(3)	(4)			(5)			
			ಎಕರೆ	ಗುಂಟೆ	ಆಣೆ	ಉತ್ತರಕ್ಕೆ	ದಕ್ಷಿಣಕ್ಕೆ	ಪೂರ್ವಕ್ಕೆ	ಪಶ್ಚಿಮಕ್ಕೆ
ಕೃಷ್ಣಾಪುರ	ರಾಘವೇಂದ್ರ ನಗರ	57 ರ ಪೈಕಿ	12	0	0	ಸನಂ 63, 61	ಸನಂ 50,64, 65	ಸನಂ 62, 64	ಸನಂ 57 ರ ಪೈಕಿ ಉಳಿದ ಜಮೀನು
ಜನವಸತಿ ಪ್ರದೇಶದ ಒಟ್ಟು ವಿಸ್ತೀರ್ಣ			12	0	0				

(3) ನೇ ಕಾಲಂನಲ್ಲಿ ನಿರ್ದಿಷ್ಟಪಡಿಸಿದ ಸರ್ವೆ ನಂಬರುಗಳೊಂದಿಗೆ ಮೇಲಿನ (4) ನೇ ಕಾಲಂನಲ್ಲಿ ಸೂಚಿಸಿರುವ ಭೂಮಿಯ ವ್ಯಾಪ್ತಿಯಲ್ಲಿ ಇರುವ ದಾಖಿಲಾಗದ ಜನವಸತಿಯನ್ನು **ಹಾವೇರಿ** ಜಿಲ್ಲೆಯ **ಸವಣೂರು** ತಾಲ್ಲೂಕಿನ **ಕೃಷ್ಣಾಪುರ** ಗ್ರಾಮದ **ರಾಘವೇಂದ್ರ ನಗರ** ಸಣ್ಣ ವಸತಿ ಸಮೂಹ ಭಾಗದ ಜನವಸತಿ ಪ್ರದೇಶ(ಗ್ರಾಮಠಾಣಾ) ಎಂಬುದಾಗಿ ಪರಿವರ್ತಿಸಲಾಗಿದೆ ಎಂದು ಈ ಮೂಲಕ ಘೋಷಿಸಿದೆ.

ಮೇಲೆ ನಿರ್ದಿಷ್ಟಪಡಿಸಿದ ಪ್ರಸ್ತಾವನೆಯು, ಕರ್ನಾಟಕ ಭೂಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 12) 5ನೇ ಪ್ರಕರಣದಡಿ ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟವಾದ ಅಂತಿಮ ಅಧಿಸೂಚನೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಾರುತಿ ಎಂ.ಪಿ)
ನಿರ್ದೇಶಕರು,
ಕಂದಾಯ ಗ್ರಾಮಗಳ ರಚನಾ ಕೋಶ
ಹಾಗೂ ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ
ಕಂದಾಯ ಇಲಾಖೆ.

PR-1756

GOVERNEMNT OF KARNATAKA

No.:RC-CFS0ADMN/113/2025
E- 1813001

Karnataka Government Secretariat
Multi Storied Building
Bengaluru, 560001
Date :17-11 -2025

FINAL NOTIFICATION

Whereas the draft of the Notification **No.:RC-CFS0ADMN/113/2025 Dated:10-07-2025** regarding altering the limits of **Muddinakoppa** village of **Hirekerur** Taluk and **Haveri** District and constituting a new revenue village called **Basaveshwara Badavane** was published as required by section 6 of the Karnataka Land Revenue Act, 1964 (Karnataka act No.12 of 1964) in the Karnataka Gazette **Dated: 17-07-2025** inviting objections or suggestions from all the persons likely to be affected thereby within thirty days from the date of its publication in the Official Gazette.

And whereas, the said gazette was made available to the public on **Dated: 19-07-2025;** And whereas, no objections and suggestions have been received;

Now, therefore, in exercise of the powers conferred by section 5 of Karnataka Land Revenue Act, 1964 (Karnataka act No.12 of 1964) the Government of Karnataka here by makes the following notification, namely:-

SCHEDULE

Land bearing surveynumbers and extent specified below in column(3) of the table shall be declared ashabitation areaof **Basaveshwara Badavane** village of **Hirekerur** Taluk of **Haveri** District convert the same to form hamlet/extension within the boundary of **Muddinakoppa** Revenue village and same will herein after be named as **Basaveshwara Badavane** of **Muddinakoppa** villagein **Hirekerur** Taluk of **Haveri** District.

TABLE

Name of the revenuevillage/villages in Whichunrecorded habitation is located	**Present name of theunrecorded habitation**	**Survey number**	**Total extent of land on which it is located**			**Boundaries**			
1	**2**	**3**	**4**			**5**			
			Acre	**Gunta**	**Anna**	**North**	**South**	**East**	**West**
Muddinakoppa	**Basaveshwara Badavane**	74	13	12	00	RSNO.53, 69,70,73	Road	RSNO.73	RSNO.52,69,RSNO. 74A PYKI
		74B	0	35	00				
Total extentofunrecordedhabitation			**14**	**07**	**00**				

It is hereby declared that the extent of land indicated in the columns(4) above with survey numbers specified in column (3) on which the said unrecorded habitation located is proposed to be converted as habitation area (Gramatana) of **Basaveshwara Badavane** hamlet of **Muddinakoppa** village in **Hirekerur** Taluk of **Haveri** District.

The proposal specified above shall come into effect from such date as the State Government may specify by Notification proposed to be issued under section 5 of the Karnataka Land Revenue Act, 1964 (Karnataka Act No.12 of 1964).

By order in the name of the
Governor of Karnataka

(Maruthi M.P)
Director,
Cell for creation of revenue villages
and Ex-officio Additional Secretary to Govt.
Revenue Department

ಕರ್ನಾಟಕ ಸರ್ಕಾರ

No.:RC-CFS0ADMN/113/2025
ಇ– 1813001

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು,560001
ದಿನಾಂಕ: 17–11–2025

ಅಂತಿಮ ಅಧಿಸೂಚನೆ

ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ (1964 ರ ಕರ್ನಾಟಕ ಅಧಿನಿಯಮ 12) 6ನೇ ಪ್ರಕರಣದಲ್ಲಿ ಅಗತ್ಯಪಡಿಸಲಾದಂತೆ **ಹಾವೇರಿ** ಜಿಲ್ಲೆಯ **ಹಿರೇಕೆರೂರ** ತಾಲ್ಲೂಕಿನ **ಮುದ್ದಿನಕೊಪ್ಪ** ಗ್ರಾಮದ ಸರಹದ್ದುಗಳನ್ನು ಮಾರ್ಪಡಿಸಲು ಮತ್ತು ಹೊಸದಾಗಿ **ಬಸವೇಶ್ವರ ಬಡಾವಣೆ** ಎಂಬ ಉಪ ಗ್ರಾಮವನ್ನು ಸ್ಥಾಪಿಸುವ ಕುರಿತು **ಸಂಖ್ಯೆ:** No.:**RC-CFS0ADMN/113/2025 ದಿನಾಂಕ:10-07-2025** ರ ಮೂಲಕ ಕರಡು ಅಧಿಸೂಚನೆಯನ್ನು ಅದರಿಂದ ಬಾಧಿತರಾಗಬಹುದಾದ ಎಲ್ಲ ವ್ಯಕ್ತಿಗಳಿಂದ ಅದನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಆಕ್ಷೇಪಣೆಗಳು ಅಥವಾ ಸಲಹೆಗಳನ್ನು ಆಹ್ವಾನಿಸಿ, **ದಿನಾಂಕ: 17-07-2025** ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿರುವುದರಿಂದ;

ಮತ್ತು ಸದರಿ ರಾಜ್ಯಪತ್ರವನ್ನು ಸಾರ್ವಜನಿಕರಿಗೆ **ದಿನಾಂಕ:19-07-2025** ರಿಂದ ಲಭ್ಯವಾಗುವಂತೆ ಮಾಡಿರುವುದರಿಂದ; ಹಾಗೂ ಆಕ್ಷೇಪಣೆಗಳು ಮತ್ತು ಸಲಹೆಗಳು ಸ್ವೀಕೃತವಾಗದೇ ಇರುವುದರಿಂದ;

ಈಗ ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ (1964 ರ ಕರ್ನಾಟಕ ಅಧಿನಿಯಮ 12) 5ನೇ ಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಮುಂದಿನ ಅಧಿಸೂಚನೆಯನ್ನು ಮಾಡುತ್ತಿದೆ, ಎಂದರೆ:–

ಅನುಸೂಚಿ–1

ಕೋಷ್ಟಕದ (3) ನೇ ಕಾಲಂನಲ್ಲಿ ನಿರ್ದಿಷ್ಟಪಡಿಸಿರುವ ಸರ್ವೆ ನಂಬರುಗಳು ಹಾಗೂ ವಿಸ್ತೀರ್ಣದ ಜಮೀನುಗಳನ್ನು ಹೊಂದಿರುವ **ಹಾವೇರಿ** ಜಿಲ್ಲೆಯ **ಹಿರೇಕೆರೂರ** ತಾಲ್ಲೂಕಿನ **ಬಸವೇಶ್ವರ ಬಡಾವಣೆ** ಗ್ರಾಮದ ಜನವಸತಿ ಪ್ರದೇಶವೆಂದು ಘೋಷಿಸತಕ್ಕದ್ದು, ಮತ್ತು ಅದನ್ನು **ಮುದ್ದಿನಕೊಪ್ಪ** ಕಂದಾಯ ಗ್ರಾಮದ ಸರಹದ್ದಿನೊಳಗೆ ಸಣ್ಣ ವಸತಿ ಸಮೂಹ/ವ್ಯಾಪ್ತಿಯನ್ನು ರಚಿಸಲು ಪರಿವರ್ತಿಸತಕ್ಕದ್ದು ಹಾಗೂ ಅದನ್ನು ಇನ್ನುಮುಂದೆ **ಹಾವೇರಿ** ಜಿಲ್ಲೆಯ **ಹಿರೇಕೆರೂರ** ತಾಲ್ಲೂಕಿನ **ಬಸವೇಶ್ವರ ಬಡಾವಣೆ** ಗ್ರಾಮ ಎಂಬುದಾಗಿ ಹೆಸರಿಸತಕ್ಕದ್ದು,

ಕೋಷ್ಟಕ

ದಾಖಲಾಗದ ಜನವಸತಿಇರುವ ಕಂದಾಯಗ್ರಾಮ/ ಗ್ರಾಮಗಳಹೆಸರು	ದಾಖಲಾಗದ ಜನವಸತಿಯ ಈಗಿನ ಹೆಸರು	ಅದು ಇರುವಂಥ ಸರ್ವೆ ನಂಬರುಗಳು	ಅದು ಇರುವಂಥ ಭೂಮಿಯ ಒಟ್ಟು ವ್ಯಾಪ್ತಿ			ಸರಹದ್ದುಗಳು			
1	2	3	4			5			
			ಎಕರೆ	ಗುಂಟೆ	ಆಣೆ	ಉತ್ತರ	ದಕ್ಷಿಣ	ಪೂರ್ವ	ಪಶ್ಚಿಮ
ಮುದ್ದಿನಕೊಪ್ಪ	ಬಸವೇಶ್ವರ ಬಡಾವಣೆ	74	13	12	00	ಸರ್ವೇ ನಂಬರ. 53,69,70, 73	ರಸ್ತೆ	ಸರ್ವೇ ನಂಬರ. 73	ಸರ್ವೇ ನಂಬರ.52,69, ಸರ್ವೇ ನಂಬರ.74ಅ ಪೈಕಿ
		74ಬ	0	35	00				
ಜನವಸತಿ ಪ್ರದೇಶದ ಒಟ್ಟು ವಿಸ್ತೀರ್ಣ			14	07	00				

(3) ನೇ ಕಾಲಂನಲ್ಲಿ ನಿರ್ದಿಷ್ಟಪಡಿಸಿದ ಸರ್ವೆ ನಂಬರುಗಳೊಂದಿಗೆ ಮೇಲಿನ (4) ನೇ ಕಾಲಂನಲ್ಲಿ ಸೂಚಿಸಿರುವ ಭೂಮಿಯ ವ್ಯಾಪ್ತಿಯಲ್ಲಿ ಇರುವ ದಾಖಿಲಾಗದ ಜನವಸತಿಯನ್ನು **ಹಾವೇರಿ** ಜಿಲ್ಲೆಯ **ಹಿರೇಕೆರೂರ** ತಾಲ್ಲೂಕಿನ **ಮುದ್ದಿನಕೊಪ್ಪ** ಗ್ರಾಮದ **ಬಸವೇಶ್ವರ ಬಡಾವಣೆ** ಸಣ್ಣ ವಸತಿ ಸಮೂಹ ಜನವಸತಿ ಪ್ರದೇಶ (ಗ್ರಾಮಠಾಣಾ) ಎಂಬುದಾಗಿ ಪರಿವರ್ತಿಸಲಾಗಿದೆಎಂದು ಈ ಮೂಲಕ ಘೋಷಿಸಿದೆ.

ಮೇಲೆ ನಿರ್ದಿಷ್ಟ ಪಡಿಸಿದ ಪ್ರಸ್ತಾವನೆಯು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ (1964 ಕರ್ನಾಟಕ ಅಧಿನಿಯಮ 12) 5ನೇ ಪ್ರಕರಣದಡಿ ರಾಜ್ಯ ಸರಕಾರವು ಸರಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕಾದ ಇದರ ಅಂತಿಮ ಅಧಿಸೂಚನೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಾರುತಿ ಎಂ.ಪಿ)
ನಿರ್ದೇಶಕರು,
ಕಂದಾಯ ಗ್ರಾಮಗಳ ರಚನಾ ಕೋಶ
ಹಾಗೂ ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ
ಕಂದಾಯ ಇಲಾಖೆ.

PR-1757

GOVERNEMNT OF KARNATAKA

No.:RC-CFS0ADMN/110/2025
E- 1812631

Karnataka Government Secretariat
Multi Storied Building
Bengaluru, 560001
Date :17-11 -2025

FINAL NOTIFICATION

Whereas the draft of the Notification **No.:RC-CFS0ADMN/110/2025 Dated: 05-07-2025** regarding altering the limits of **Kachavi** village of **Hirekerur** Taluk and **Haveri** District and constituting a new revenue village called **Hosanagara** was published as required by section 6 of the Karnataka Land Revenue Act, 1964 (Karnataka act No.12 of 1964) in the Karnataka Gazette **Dated:15-07-2025** inviting objections or suggestions from all the persons likely to be affected thereby within thirty days from the date of its publication in the Official Gazette.

And whereas, the said gazette was made available to the public on **Dated:19-07-2025;** And whereas, no objections and suggestions have been received;

Now, therefore, in exercise of the powers conferred by section 5 of Karnataka Land Revenue Act, 1964 (Karnataka act No.12 of 1964) the Government of Karnataka here by makes the following notification, namely:-

SCHEDULE

Land bearing surveynumbers and extent specified below in column(3) of the table shall be declared ashabitation areaof **Hosanagara** village of **Hirekerur** Taluk of **Haveri** District convert the same to form hamlet/extension within the boundary of **Kachavi** Revenue village and same will herein after be named as **Hosanagara** of **Kachavi** villagein **Hirekerur** Taluk of **Haveri** District.

TABLE

Name of the revenuevillage/villages in Whichunrecordedhabitation is located	**Present name of theunrecorded habitation**	**Survey number**	**Total extent**			**Boundaries**			
1	2	3	4			5			
			Acre	**Gunta**	**Anna**	**North**	**South**	**East**	**West**
Kachavi	**Hosanagara**	64/2	1	38	00	Gramatana	Gramatana	RSNO.64/1	Gramatana
Total extentofunrecordedhabitation			**1**	**38**	**00**				

It is hereby declared that the extent of land indicated in the columns(4) above with survey numbers specified in column (3) on which the said unrecorded habitation located is proposed to be converted as habitation area (Gramatana) of **Hosanagara** hamlet of **Kachavi** village in **Hirekerur** Taluk of **Haveri** District.

The proposal specified above shall come into effect from such date as the State Government may specify by Notification proposed to be issued under section 5 of the Karnataka Land Revenue Act, 1964 (Karnataka Act No.12 of 1964).

By order in the name of the
Governor of Karnataka

(Maruthi M.P)
Director,
Cell for creation of revenue villages
and Ex-officio Additional Secretary to Govt.
Revenue Department

ಕರ್ನಾಟಕ ಸರ್ಕಾರ

No.:RC-CFS0ADMN/110/2025
ಇ– 1812631

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು,560001
ದಿನಾಂಕ: 17–11–2025

ಅಂತಿಮ ಅಧಿಸೂಚನೆ

ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ (1964 ರ ಕರ್ನಾಟಕ ಅಧಿನಿಯಮ 12) 6ನೇ ಪ್ರಕರಣದಲ್ಲಿ ಅಗತ್ಯಪಡಿಸಲಾದಂತೆ **ಹಾವೇರಿ** ಜಿಲ್ಲೆಯ **ಹಿರೇಕೆರೂರ** ತಾಲ್ಲೂಕಿನ **ಕಚವಿ** ಗ್ರಾಮದ ಸರಹದ್ದುಗಳನ್ನು ಮಾರ್ಪಡಿಸಲು ಮತ್ತು ಹೊಸದಾಗಿ **ಹೊಸನಗರ** ಎಂಬ ಉಪ ಗ್ರಾಮವನ್ನು ಸ್ಥಾಪಿಸುವ ಕುರಿತು **ಸಂಖ್ಯೆ:** No.:**RC-CFS0ADMN/110/2025 ದಿನಾಂಕ:05-07-2025** ರ ಮೂಲಕ ಕರಡು ಅಧಿಸೂಚನೆಯನ್ನು ಅದರಿಂದ ಬಾಧಿತರಾಗಬಹುದಾದ ಎಲ್ಲ ವ್ಯಕ್ತಿಗಳಿಂದ ಅದನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಆಕ್ಷೇಪಣೆಗಳು ಅಥವಾ ಸಲಹೆಗಳನ್ನು ಆಹ್ವಾನಿಸಿ, **ದಿನಾಂಕ: 15-07-2025** ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿರುವುದರಿಂದ;

ಮತ್ತು ಸದರಿ ರಾಜ್ಯಪತ್ರವನ್ನು ಸಾರ್ವಜನಿಕರಿಗೆ **ದಿನಾಂಕ:19-07-2025** ರಿಂದ ಲಭ್ಯವಾಗುವಂತೆ ಮಾಡಿರುವುದರಿಂದ; ಹಾಗೂ ಆಕ್ಷೇಪಣೆಗಳು ಮತ್ತು ಸಲಹೆಗಳು ಸ್ವೀಕೃತವಾಗದೇ ಇರುವುದರಿಂದ;

ಈಗ ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ (1964 ರ ಕರ್ನಾಟಕ ಅಧಿನಿಯಮ 12) 5ನೇ ಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಮುಂದಿನ ಅಧಿಸೂಚನೆಯನ್ನು ಮಾಡುತ್ತಿದೆ, ಎಂದರೆ:–

ಅನುಸೂಚಿ–1

ಕೋಷ್ಟಕದ (3) ನೇ ಕಾಲಂನಲ್ಲಿ ನಿರ್ದಿಷ್ಟಪಡಿಸಿರುವ ಸರ್ವೆ ನಂಬರುಗಳು ಹಾಗೂ ವಿಸ್ತೀರ್ಣದ ಜಮೀನುಗಳನ್ನು ಹೊಂದಿರುವ **ಹಾವೇರಿ** ಜಿಲ್ಲೆಯ **ಹಿರೇಕೆರೂರ** ತಾಲ್ಲೂಕಿನ **ಹೊಸನಗರ** ಗ್ರಾಮದ ಜನವಸತಿ ಪ್ರದೇಶವೆಂದು ಘೋಷಿಸತಕ್ಕದ್ದು, ಮತ್ತು ಅದನ್ನು **ಕಚವಿ** ಕಂದಾಯ ಗ್ರಾಮದ ಸರಹದ್ದಿನೊಳಗೆ ಸಣ್ಣ ವಸತಿ ಸಮೂಹ/ವ್ಯಾಪ್ತಿಯನ್ನು ರಚಿಸಲು ಪರಿವರ್ತಿಸತಕ್ಕದ್ದು ಹಾಗೂ ಅದನ್ನು ಇನ್ನುಮುಂದೆ **ಹಾವೇರಿ** ಜಿಲ್ಲೆಯ **ಹಿರೇಕೆರೂರ** ತಾಲ್ಲೂಕಿನ **ಹೊಸನಗರ** ಗ್ರಾಮ ಎಂಬುದಾಗಿ ಹೆಸರಿಸತಕ್ಕದ್ದು,

ಕೋಷ್ಟಕ

ದಾಖಲಾಗದ ಜನವಸತಿಇರುವ ಕಂದಾಯಗ್ರಾಮ/ ಗ್ರಾಮಗಳಹೆಸರು	ದಾಖಲಾಗದ ಜನವಸತಿಯ ಈಗಿನ ಹೆಸರು	ಸರ್ವೆ ನಂಬರುಗಳು	ಒಟ್ಟು ವ್ಯಾಪ್ತಿ			ಸರಹದ್ದುಗಳು			
1	2	3	4			5			
			ಎಕರೆ	ಗುಂಟೆ	ಆಣೆ	ಉತ್ತರ	ದಕ್ಷಿಣ	ಪೂರ್ವ	ಪಶ್ಚಿಮ
ಕಚವಿ	ಹೊಸನಗರ	64/2	01	38	00	ಗ್ರಾಮ ಠಾಣ	ಗ್ರಾಮಠಾಣ	ಸರ್ವೇ ನಂಬರ. 64/1	ಗ್ರಾಮ ಠಾಣ
ಜನವಸತಿ ಪ್ರದೇಶದ ಒಟ್ಟು ವಿಸ್ತೀರ್ಣ			01	38	00				

(3) ನೇ ಕಾಲಂನಲ್ಲಿ ನಿರ್ದಿಷ್ಟಪಡಿಸಿದ ಸರ್ವೆ ನಂಬರುಗಳೊಂದಿಗೆ ಮೇಲಿನ (4) ನೇ ಕಾಲಂನಲ್ಲಿ ಸೂಚಿಸಿರುವ ಭೂಮಿಯ ವ್ಯಾಪ್ತಿಯಲ್ಲಿ ಇರುವ ದಾಖಿಲಾಗದ ಜನವಸತಿಯನ್ನು **ಹಾವೇರಿ** ಜಿಲ್ಲೆಯ **ಹಿರೇಕೆರೂರ** ತಾಲ್ಲೂಕಿನ **ಕಚವಿ** ಗ್ರಾಮದ **ಹೊಸನಗರ** ಸಣ್ಣ ವಸತಿ ಸಮೂಹ ಜನವಸತಿ ಪ್ರದೇಶ (ಗ್ರಾಮಠಾಣಾ) ಎಂಬುದಾಗಿ ಪರಿವರ್ತಿಸಲಾಗಿದೆಎಂದು ಈ ಮೂಲಕ ಘೋಷಿಸಿದೆ.

ಮೇಲೆ ನಿರ್ದಿಷ್ಟ ಪಡಿಸಿದ ಪ್ರಸ್ತಾವನೆಯು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ (1964 ಕರ್ನಾಟಕ ಅಧಿನಿಯಮ 12) 5ನೇ ಪ್ರಕರಣದಡಿ ರಾಜ್ಯ ಸರಕಾರವು ಸರಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕಾದ ಇದರ ಅಂತಿಮ ಅಧಿಸೂಚನೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಾರುತಿ ಎಂ.ಪಿ)
ನಿರ್ದೇಶಕರು,
ಕಂದಾಯ ಗ್ರಾಮಗಳ ರಚನಾ ಕೋಶ
ಹಾಗೂ ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ
ಕಂದಾಯ ಇಲಾಖೆ.

PR-1758

GOVERNEMNT OF KARNATAKA

NO:.RC-CFS0ADMN/230/2025
E-1852032

Karnataka Government Secretariat
Multi Storied Building
Bengaluru,560001
Date:17-11-2025

FINAL NOTIFICATION

Whereas the draft of the Notification No. **RC-CFS0ADMN/230/2025-RC** Dated: **11-08-2025** regarding altering the extent habitation area in the limits of **Ghalapooji** village of **Byadagi** Taluk and **Haveri** District and constituting a new revenue village called **Ayynagudda Badavane** was published as required by section 6 of the Karnataka Land Revenue Act, 1964 (Karnataka act No.12 of 1964) in the Karnataka Gazette Dated: **20-08-2025** inviting objections or suggestions from all the persons likely to be affected thereby within thirty days from the date of its publication in the Official Gazette.

And whereas, the said gazette was made available to the public on Dated: **20-09-2025** And whereas, no objections and suggestions have been received;

Now, therefore, in exercise of the powers conferred by section 5 of the Karnataka Land Revenue Act, 1964 (Karnataka act No.12 of 1964) the Government of Karnataka hereby makes the following notification to constitute a hamlet/extention within the limts of revenue village, namely:-

SCHEDULE

Land bearing survey numbers and extent specified below in column (3) of the table shall be declared as habitation area of **Ayynagudda Badavane** village of **Byadagi** Taluk Of **Haveri** District and convert the same to from hamlet/extention within the boundary of **Ghalapooji** Revenue village and same will herein after be named as **Ayynagudda Badavane** of **Ghalapooji** village **Byadagi** Taluk of **Haveri** District.

TABLE

Nameofthereven uevillageinWhich unrecordedhabit ationis located	**New name oftheunreco rdedhabitat ion**	**Surv ey num ber**	**Total extent**		**Boundaries**			
			Acre	**Gunta**	**North**	**South**	**East**	**West**
1	2	3	4		5			
Ghalapooji	**Ayynagudd a Badavane**	222	04	01	Sy.no 221,Sy .no 13	Road, Gramat hana	Sy no01	Syno 160
Total			**04**	**01**				

It is hereby declared that the extent of land indicated in the column(4) above with survey numbers specified in column (3) on which the said unrecorded habitation is located is proposed to be converted as habitation area (Gramatana) of **Ayynagudda Badavane** hamlet/extention/part of **Ghalapooji** Village in **Byadagi** Taluk Of **Haveri** District.

The proposal specified above shall come into effect from such date as the State Government may specify by Notification proposed to be issued under section 5 of the Karnataka Land Revenue Act, 1964 (Karnataka Act No.12 of 1964).

By order in the name of the
Governor of Karnataka

(Maruthi M.P)
Director,
Cell for creation of revenue villages
and Ex-officio Additional Secretary to Govt.
Revenue Department

ಕರ್ನಾಟಕ ಸರ್ಕಾರ

No .:RC-CFS0ADMN/230/2025
ಇ–1852032

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು,560001
ದಿನಾಂಕ: 17–11–2025

ಅಂತಿಮ ಅಧಿಸೂಚನೆ

ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ (1964 ರ ಕರ್ನಾಟಕ ಅಧಿನಿಯಮ 12) 6ನೇ ಪ್ರಕರಣದಲ್ಲಿ ಅಗತ್ಯಪಡಿಸಲಾದಂತೆ **ಹಾವೇರಿ** ಜಿಲ್ಲೆಯ **ಬ್ಯಾಡಗಿ** ತಾಲ್ಲೂಕಿನ **ಘಾಳಪೂಜಿ** ಗ್ರಾಮದ ಸರಹದ್ದುಗಳನ್ನು ಮಾರ್ಪಡಿಸಲು ಮತ್ತು ಹೊಸದಾಗಿ **ಅಯ್ಯನಗುಡ್ಡ ಬಡಾವಣೆ** ಎಂಬ ಉಪ ಗ್ರಾಮವನ್ನು ಸ್ಥಾಪಿಸುವ ಕುರಿತು **ಸಂಖ್ಯೆ: RC-CFS0ADMN/230/2025 ದಿನಾಂಕ:11-08-2025** ರ ಮೂಲಕ ಕರಡು ಅಧಿಸೂಚನೆಯನ್ನು ಅದರಿಂದ ಬಾಧಿತರಾಗಬಹುದಾದ ಎಲ್ಲ ವ್ಯಕ್ತಿಗಳಿಂದ ಅದನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಆಕ್ಷೇಪಣೆಗಳು ಅಥವಾ ಸಲಹೆಗಳನ್ನು ಆಹ್ವಾನಿಸಿ, **ದಿನಾಂಕ: 20-08-2025** ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿರುವುದರಿಂದ;

ಮತ್ತು ಸದರಿ ರಾಜ್ಯಪತ್ರವನ್ನು ಸಾರ್ವಜನಿಕರಿಗೆ ದಿನಾಂಕ: **20–09–2025** ರಿಂದ ಲಭ್ಯವಾಗುವಂತೆ ಮಾಡಿರುವುದರಿಂದ; ಹಾಗೂ ಆಕ್ಷೇಪಣೆಗಳು ಮತ್ತು ಸಲಹೆಗಳು ಸ್ವೀಕೃತವಾಗದೇ ಇರುವುದರಿಂದ;

ಹಾಗೂ ರಾಜ್ಯ ಸರ್ಕಾರವು ಆಕ್ಷೇಪಣೆಗಳು ಅಥವಾ ಸಲಹೆಗಳನ್ನು ಸ್ವೀಕರಿಸಿ ಮತ್ತು ಪರಿಗಣಿಸಿರುವುದರಿಂದ, ಈಗ ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ (1964 ರ ಕರ್ನಾಟಕ ಅಧಿನಿಯಮ 12) 5 ನೇ ಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಮುಂದಿನ ಅಧಿಸೂಚನೆಯನ್ನು ಮಾಡುತ್ತಿದೆ, ಎಂದರೆ:–

ಅನುಸೂಚಿ

ಈ ಕೆಳಗಿನ ಕೊಷ್ಟಕದ (3) ನೇ ಕಾಲಂನಲ್ಲಿ ನಿರ್ದಿಷ್ಟಪಡಿಸಿರುವ ಸರ್ವೇ ನಂಬರಗಳು ಹಾಗೂ ವಿಸ್ತೀರ್ಣದ ಜಮೀನುಗಳನ್ನು ಹೊಂದಿರುವ **ಹಾವೇರಿ** ಜಿಲ್ಲೆ **ಬ್ಯಾಡಗಿ** ತಾಲ್ಲೂಕಿನ **ಅಯ್ಯನಗುಡ್ಡ ಬಡಾವಣೆ** ಗ್ರಾಮದ ಜನವಸತಿ ಪ್ರದೇಶವೆಂದು ಘೋಷಿಸತಕ್ಕದು ಮತ್ತು ಅದನ್ನು **ಘಾಳಪೂಜಿ** ಕಂದಾಯ ಗ್ರಾಮದ ಸರಹದ್ದಿನೊಳಗೆ ಸಣ್ಣ ವಸತಿ ಸಮೂಹ /ವ್ಯಾಪ್ತಿಯನ್ನು ರಚಿಸಲು ಪರಿವರ್ತಿಸತಕ್ಕದ್ದು ಹಾಗೂ ಅದನ್ನು ಇನ್ನು ಮುಂದೆ **ಹಾವೇರಿ** ಜಿಲ್ಲೆಯ **ಬ್ಯಾಡಗಿ** ತಾಲ್ಲೂಕಿನ **ಅಯ್ಯನಗುಡ್ಡ ಬಡಾವಣೆ** ಎಂಬುವುದಾಗಿ ಹೆಸರಿಸತಕ್ಕದ್ದು.

ಕೋಷ್ಟಕ

ದಾಖಲಾಗದ ಜನವಸತಿ ಇರುವ ಕಂದಾಯ ಗ್ರಾಮ/ಗ್ರಾಮಗಳ ಹೆಸರು	ದಾಖಲಾಗದ ಜನವಸತಿಯ ಈಗಿನ ಹೆಸರು	ಸರ್ವೆ ನಂಬರುಗಳು	ಒಟ್ಟು ವ್ಯಾಪ್ತಿ		ಸರಹದ್ದುಗಳು			
			ಎಕರೆ	ಗುಂಟೆ	ಉತ್ತರ	ದಕ್ಷಿಣ	ಪೂರ್ವ	ಪಶ್ಚಿಮ
(1)	(2)	(3)	(4)		(5)			
ಘಾಳಪೂಜಿ	**ಅಯ್ಯನಗುಡ್ಡ ಬಡಾವಣೆ**	222	04	01	ರಿಸನಂ221, ರಿಸನಂ 13	ರಸ್ತೆ,ಗ್ರಾಮ ಠಾಣಾ	ರಿಸನಂ 01	ರಿಸನಂ 160
ಒಟ್ಟು			**04**	**01**				

(3)ನೇ ಕಾಲಂನಲ್ಲಿ ನಿರ್ದಿಷ್ಟಪಡಿಸಿದ ಸರ್ವೇ ನಂಬರಗಳೊಂದಿಗೆ ಮೇಲಿನ ನಾಲ್ಕನೇ ಕಾಲಂನಲ್ಲಿ ಸೂಚಿಸಿರುವ ಭೂಮಿಯ ವ್ಯಾಪ್ತಿಯಲ್ಲಿರುವ ದಾಖಲಾಗದ ಜನವಸತಿಯನ್ನು **ಹಾವೇರಿ** ಜಿಲ್ಲೆಯ **ಬ್ಯಾಡಗಿ**

ತಾಲ್ಲೂಕಿನ **ಘಾಳಪೂಜಿ** ಗ್ರಾಮದ **ಅಯ್ಯನಗುಡ್ಡ ಬಡಾವಣೆ** ಸಣ್ಣವಸತಿ ಸಮೂಹ/ವ್ಯಾಪ್ತಿ/ಭಾಗದ ಜನವಸತಿ ಪ್ರದೇಶ (ಗ್ರಾಮಠಾಣಾ) ಎಂಬುದಾಗಿ ಪರಿವರ್ತಿಸಲು ಉದ್ದೇಶಿಸಲಾಗಿದೆ. ಎಂದು ಈ ಮೂಲಕ ಘೋಷಿಸಿದೆ.

ಮೇಲೆ ನಿರ್ದಿಷ್ಟ ಪಡಿಸಿದ ಪ್ರಸ್ತಾವನೆಯು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ (1964 ಕರ್ನಾಟಕ ಅಧಿನಿಯಮ 12) 5ನೇ ಪ್ರಕರಣದಡಿ ರಾಜ್ಯ ಸರಕಾರವು ಸರಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕಾದ ಇದರ ಅಂತಿಮ ಅಧಿಸೂಚನೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಾರುತಿ ಎಂ.ಪಿ)
ನಿರ್ದೇಶಕರು,
ಕಂದಾಯ ಗ್ರಾಮಗಳ ರಚನಾ ಕೋಶ
ಹಾಗೂ ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ
ಕಂದಾಯ ಇಲಾಖೆ.

PR-1759

GOVERNMENT OF KARNATAKA

NO:.RC-CFS0ADMN/350/2025
E- 1872983

Karnataka Government Secretariat
Multi Storied Building
Bengaluru 560001
Date: 17 -11-2025

FINAL NOTIFICATION

Whereas the draft of the Notification No. **RC-CFS0ADMN/350/2025, Dated: 20-08-2025** regarding altering the limits of **Ganjigatti** village of **Shiggaon** Taluk in **Haveri** District and constituting a new revenue sub village called **as Charamurteshwar Nagar** sub village was published as required by section 6 of the Karnataka Land Revenue Act, 1964 (Karnataka act No.12 of 1964) in the Karnataka Gazette **Dated: 08-09-2025** inviting objections or suggestions from all the persons likely to be affected thereby within thirty days from the date of its publication in the Official Gazette addressed to the Deputy Commissioner **Haveri** district.

And whereas, the said gazette was made available to the public on **Dated:10-09-2025.** And whereas, no objections or suggestions have been received;

Now, therefore, in exercise of the powers conferred by section 5 of Karnataka Land Revenue Act, 1964 (Karnataka act No.12 of 1964) the Government of Karnataka here by makes the following notification, namely:-

SCHEDULE

Land bearing survey numbers and extent specified below in column(3) of the table shall be declared as habitation area of **Charamurteshwar Nagar** village of **Shiggaon** Taluk in **Haveri** District convert the same to form hamlet within the boundary of **Ganjigatti** revenue village and same will here in after be named as called **Charamurteshwar Nagar** of **Ganjigatti** village in **Shiggaon** Taluk of **Haveri** District.

TABLE

Name of the revenue village inWhichunrecorded habitation is located	New name of the unrecorded habitation	Survey number	Total extent			Boundaries			
			(4)			(5)			
			Acre	Gunta	Ana	North	South	East	West
(1)	(2)	(3)							
Ganjigatti	**Charamurteshwar Nagar**	71	5	07	0	Sy.no80, Remaining sy no71	Road	Sy.no82 Sy.no 80	Remainig Of sy.no 71
Total extent of unrecorded habitation			**5**	**07**	**0**				

It is hereby declared that the extent of land indicated in the columns(4) above with survey numbers specified in column (3) on which the said unrecorded habitation located is converted as habitation area(Gramatana) of **Charamurteshwar Nagar** hamlet/part of **Ganjigatti** village in **Shiggaon** Taluk of **Haveri** District.

The proposal specified above issued under section 5 of the Karnataka Land Revenue Act, 1964 (Karnataka Act No. 12 of 1964) shall come into effect from the date of final notification.

By order in the name of the
Governor of Karnataka

(Maruthi M.P)
Director,
Cell for creation of revenue villages
and Ex-officio Additional Secretary to Govt.
Revenue Department

ಕರ್ನಾಟಕ ಸರ್ಕಾರ

NO:.RC-CFS0ADMN/350/2025
ಇ–1872983

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು560001
ದಿನಾಂಕ: 17–11–2025

ಅಂತಿಮ ಅಧಿಸೂಚನೆ

ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ (1964 ರ ಕರ್ನಾಟಕ ಅಧಿನಿಯಮ 12) 6 ನೇ ಪ್ರಕರಣದಲ್ಲಿ ಅಗತ್ಯ ಪಡಿಸಲಾದಂತೆ **ಹಾವೇರಿ** ಜಿಲ್ಲೆಯ **ಶಿಗ್ಗಾಂವ** ತಾಲ್ಲೂಕಿನ **ಗಂಜಿಗಟ್ಟಿ** ಗ್ರಾಮದ ಸರಹದ್ದುಗಳನ್ನು ಮಾರ್ಪಡಿಸಲು ಮತ್ತು ಹೊಸದಾಗಿ **ಚರಮೂರ್ತೇಶ್ವರ ನಗರ** ಎಂಬ ಉಪ ಗ್ರಾಮವನ್ನು ಸ್ಥಾಪಿಸುವ ಕುರಿತು ಸಂಖ್ಯೆ: **RC-CFS0ADMN/350/2025, ದಿನಾಂಕ:20–08–2025** ರ ಮೂಲಕ ಕರಡು ಅಧಿಸೂಚನೆಯನ್ನು ಅದರಿಂದ ಬಾಧಿತರಾಗಬಹುದಾದ ಎಲ್ಲ ವ್ಯಕ್ತಿಗಳಿಂದ ಅದನ್ನು ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಆಕ್ಷೇಪಣೆಗಳು ಅಥವಾ ಸಲಹೆಗಳನ್ನು ಆಹ್ವಾನಿಸಿ, **ದಿನಾಂಕ:08–09–2025** ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿರುವುದರಿಂದ,

ಮತ್ತು ಸದರಿ ರಾಜ್ಯಪತ್ರವನ್ನು ಸಾರ್ವಜನಿಕರಿಗೆ **ದಿನಾಂಕ:–10–09–2025** ರಿಂದ ಲಭ್ಯವಾಗುವಂತೆ ಮಾಡಿರುವುದರಿಂದ ಹಾಗೂ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗದೇ ಇರುವುದರಿಂದ,

ಈಗ ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ (1964 ರ ಕರ್ನಾಟಕ ಅಧಿನಿಯಮ 12) 5 ನೇ ಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಮುಂದಿನ ಅಧಿಸೂಚನೆಯನ್ನು ಮಾಡುತ್ತಿದೆ, ಎಂದರೆ:–

ಅನುಸೂಚಿ

ಕೋಷ್ಟಕದ (3) ನೇ ಕಾಲಂನಲ್ಲಿ ನಿರ್ದಿಷ್ಟಪಡಿಸಿರುವ ಸರ್ವೆ ನಂಬರುಗಳು ಹಾಗೂ ವಿಸ್ತೀರ್ಣದ ಜಮೀನುಗಳನ್ನು ಹೊಂದಿರುವ **ಹಾವೇರಿ** ಜಿಲ್ಲೆಯ **ಶಿಗ್ಗಾಂವ** ತಾಲ್ಲೂಕಿನ **ಚರಮೂರ್ತೇಶ್ವರ ನಗರ** ಗ್ರಾಮದ ಜನವಸತಿ ಪ್ರದೇಶವೆಂದು ಘೋಷಿಸತಕ್ಕದ್ದು, ಮತ್ತು ಅದನ್ನು **ಗಂಜಿಗಟ್ಟಿ** ಕಂದಾಯ ಗ್ರಾಮದ ಸರಹದ್ದಿನೊಳಗೆ ಸಣ್ಣ ವಸತಿ ಸಮೂಹ ವ್ಯಾಪ್ತಿಯನ್ನು ರಚಿಸಲು ಪರಿವರ್ತಿಸತಕ್ಕದ್ದು ಹಾಗೂ ಅದನ್ನು ಇನ್ನು ಮುಂದೆ **ಹಾವೇರಿ** ಜಿಲ್ಲೆಯ **ಶಿಗ್ಗಾಂವ** ತಾಲ್ಲೂಕಿನ **ಚರಮೂರ್ತೇಶ್ವರ ನಗರ** ಎಂಬುದಾಗಿ ಹೆಸರಿಸತಕ್ಕದ್ದು,

ಕೋಷ್ಟಕ

ದಾಖಲಾಗದ ಜನವಸತಿ ಇರುವ ಕಂದಾಯ ಗ್ರಾಮ/ ಗ್ರಾಮಗಳ ಹೆಸರು	ದಾಖಲಾಗದಜನವಸತಿಯ ಈಗಿನಹೆಸರು	ಸರ್ವೆ ನಂಬರುಗಳು	ಒಟ್ಟು ವ್ಯಾಪ್ತಿ			ಸರಹದ್ದುಗಳು			
			(4)			(5)			
			ಎಕರೆ	ಗುಂಟೆ	ಆಣೆ	ಉತ್ತರ	ದಕ್ಷಿಣ	ಪೂರ್ವ	ಪಶ್ಚಿಮ
(1)	(2)	(3)							
ಗಂಜಿಗಟ್ಟಿ	ಚರಮೂರ್ತೇಶ್ವರ ನಗರ	71	5	07	0	ಸನಂ 80, ಸನಂ71ರಉಳಿದ ಜಮೀನು	ರಸ್ತೆ	ಸನಂ 82, ಸನಂ 80,	ಸ ನಂ 71 ರ ಉಳಿದ ಜಮೀನು
ಜನವಸತಿ ಪ್ರದೇಶದ ಒಟ್ಟು ವಿಸ್ತೀರ್ಣ			**5**	**07**	**0**				

(3) ನೇ ಕಾಲಂನಲ್ಲಿ ನಿರ್ದಿಷ್ಟಪಡಿಸಿದ ಸರ್ವೆ ನಂಬರುಗಳೊಂದಿಗೆ ಮೇಲಿನ (4) ನೇ ಕಾಲಂನಲ್ಲಿ ಸೂಚಿಸಿರುವ ಭೂಮಿಯ ವ್ಯಾಪ್ತಿಯಲ್ಲಿ ಇರುವ ದಾಖಲಾಗದ ಜನವಸತಿಯನ್ನು **ಹಾವೇರಿ** ಜಿಲ್ಲೆಯ **ಶಿಗ್ಗಾಂವ** ತಾಲ್ಲೂಕಿನ **ಗಂಜಿಗಟ್ಟಿ** ಗ್ರಾಮದ **ಚರಮೂರ್ತೇಶ್ವರ ನಗರ** ಸಣ್ಣ ವಸತಿ ಸಮೂಹ ಭಾಗದ ಜನವಸತಿ ಪ್ರದೇಶ (ಗ್ರಾಮಠಾಣಾ) ಎಂಬುದಾಗಿ ಪರಿವರ್ತಿಸಲಾಗಿದೆ ಎಂದು ಈ ಮೂಲಕ ಘೋಷಿಸಿದೆ.

ಮೇಲೆ ನಿರ್ದಿಷ್ಟಪಡಿಸಿದ ಪ್ರಸ್ತಾವನೆಯು, ಕರ್ನಾಟಕ ಭೂಕಂದಾಯಅಧಿನಿಯಮ, 1964ರ (1964ರ ಕರ್ನಾಟಕಅಧಿನಿಯಮ 12) 5ನೇ ಪ್ರಕರಣದಡಿರಾಜ್ಯ ಸರ್ಕಾರವು ಸರ್ಕಾರಿರಾಜ್ಯಪತ್ರದಲ್ಲಿ ಪ್ರಕಟವಾದಅಂತಿಮಅಧಿಸೂಚನೆಯ ದಿನಾಂಕದಿಂದಜಾರಿಗೆ ಬರತಕ್ಕದ್ದು.

ಕರ್ನಾಟಕರಾಜ್ಯಪಾಲರಆದೇಶಾನುಸಾರ
ಮತ್ತುಅವರ ಹೆಸರಿನಲ್ಲಿ

(ಮಾರುತಿ ಎಂ.ಪಿ)
ನಿರ್ದೇಶಕರು,
ಕಂದಾಯ ಗ್ರಾಮಗಳ ರಚನಾ ಕೋಶ
ಹಾಗೂ ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ
ಕಂದಾಯ ಇಲಾಖೆ.

PR-1760

GOVERNMENT OF KARNATAKA

No.RC-CFS0ADMN/511/2025
E-1893466

Karnataka Government Secretariat
Multi Storied Building
Bengaluru 560001
Date: 17-11-2025

FINAL NOTIFICATION

Whereas the draft of the Notification No**. RC-CFS0ADMN/511/2025, Dated: 06-09-2025** regarding altering the limits of **Bammanahalli** village of **Hangal** Taluk in **Haveri** District and constituting a new revenue sub village called **Noorani Nagar and Marikamba Nagar** as sub village was published as required by section 6 of the Karnataka Land Revenue Act, 1964 (Karnataka act No.12 of 1964) in the Karnataka Gazette **Dated: 23-09-2025** inviting objections or suggestions from all the persons likely to be affected thereby within thirty days from the date of its publication in the Official Gazette addressed to the Deputy Commissioner **Haveri** district.

And whereas, the said gazette was made available to the public on **Dated:25-09-2025.**And whereas, no objections or suggestions have been received;

Now, therefore, in exercise of the powers conferred by section 5 of Karnataka Land Revenue Act, 1964 (Karnataka act No.12 of 1964) the Government of Karnataka here by makes the following notification, namely:-

SCHEDULE-1

Land bearing survey numbers and extent specified below in column(3) of the table shall be declared as habitation area of **Noorani Nagar** village of **Hangal** Taluk in **Haveri** District convert the same to form hamlet within the boundary of **Bammanahalli** revenue village and same will here in after be named as called **Noorani Nagar** of **Bammanahalli** village in **Hangal** Taluk of **Haveri** District.

TABLE-1

Name of the revenue village in Which unrecorded habitation is located	**New name of the unrecorded habitation**	**Survey number**	**Total extent**			**Boundaries**			
			(4)			**(5)**			
			Acre	**Gunta**	**Ana**	**East**	**West**	**North**	**South**
(1)	(2)	(3)							
Bammanahalli	**Noorani Nagar**	71/*/*	6	27	–	RSNO 71 REMAINING A	RSNO 73 & GRAMTHANA	RSNO 73 & 72	ROAD & GRAMTHANA
Total extent of unrecorded habitation			**6**	**27**	**-**				

It is hereby declared that the extent of land indicated in the columns(4) above with survey numbers specified in column (3) on which the said unrecorded habitation located is converted as habitation area(Gramatana) of **Noorani Nagar** hamlet/part of **Bammanahalli** village in **Hangal** Taluk of **Haveri** District.

SCHEDULE-2

Land bearing survey numbers and extent specified below in column(3) of the table shall be declared as habitation area of **Marikamba Nagar** village of **Hangal** Taluk in **Haveri** District convert the same to form hamlet within the boundary of **Bammanahalli** revenue village and same will here in after be named as called **Marikamba Nagar** of **Bammanahalli** village in **Hangal** Taluk of **Haveri** District.

TABLE-2

Name of the revenue village in Which unrecorded habitation is located	New name of the unrecorded habitation	Survey number	Total extent			Boundaries			
			(4)			(5)			
			Acre	Gunta	Ana	East	West	North	South
(1)	(2)	(3)							
Bammanahalli	**Marikamba Nagar**	40/*/*	2	28	–	RSNO 37& 42	RSNO 39	RSNO 39& 38	RSNO 1
		41/*/*	1	20	–				
		42/*/*	1	28	–				
Total extent of unrecorded habitation			**5**	**36**	**-**				

It is hereby declared that the extent of land indicated in the columns(4) above with survey numbers specified in column (3) on which the said unrecorded habitation located is converted as habitation area(Gramatana) of **Marikamba Nagar** hamlet/part of **Bammanahalli** village in **Hangal** Taluk of **Haveri** District.

The proposal specified above issued under section 5 of the Karnataka Land Revenue Act, 1964 (Karnataka Act No. 12 of 1964) shall come into effect from the date of final notification.

By order in the name of the
Governor of Karnataka

(Maruthi M.P)
Director,
Cell for creation of revenue villages
and Ex-officio Additional Secretary to Govt.
Revenue Department

ಕರ್ನಾಟಕ ಸರ್ಕಾರ

NO:.RC-CFS0ADMN/511/2025
E–1893466

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, 560001
ದಿನಾಂಕ:17–11–2025

ಅಂತಿಮ ಅಧಿಸೂಚನೆ

ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ (1964 ರ ಕರ್ನಾಟಕ ಅಧಿನಿಯಮ 12) 6 ನೇ ಪ್ರಕರಣದಲ್ಲಿ ಅಗತ್ಯ ಪಡಿಸಲಾದಂತೆ **ಹಾವೇರಿ** ಜಿಲ್ಲೆಯ **ಹಾನಗಲ್ಲ** ತಾಲ್ಲೂಕಿನ **ಬಮ್ಮನಹಳ್ಳಿ** ಗ್ರಾಮದ ಸರಹದ್ದುಗಳನ್ನು ಮಾರ್ಪಡಿಸಲು ಮತ್ತು ಹೊಸದಾಗಿ **ನೂರಾನಿ ನಗರ ಮತ್ತು ಮಾರಿಕಾಂಬ ನಗರ** ಎಂಬ ಉಪ ಗ್ರಾಮವನ್ನು ಸ್ಥಾಪಿಸುವ ಕುರಿತು ಸಂಖ್ಯೆ: **RC-CFS0ADMN/511/2025** **ದಿನಾಂಕ: 6–09–2025** ರ ಮೂಲಕ ಕರಡು ಅಧಿಸೂಚನೆಯನ್ನು ಅದರಿಂದ ಬಾಧಿತರಾಗಬಹುದಾದ ಎಲ್ಲ ವ್ಯಕ್ತಿಗಳಿಂದ ಅದನ್ನು ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಆಕ್ಷೇಪಣೆಗಳು ಅಥವಾ ಸಲಹೆಗಳನ್ನು ಆಹ್ವಾನಿಸಿ, **ದಿನಾಂಕ: 23–09–2025** ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿರುವುದರಿಂದ,

ಮತ್ತು ಸದರಿ ರಾಜ್ಯಪತ್ರವನ್ನು ಸಾರ್ವಜನಿಕರಿಗೆ **ದಿನಾಂಕ:–25–9–2025** ರಿಂದ ಲಭ್ಯವಾಗುವಂತೆ ಮಾಡಿರುವುದರಿಂದ ಹಾಗೂ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗದೇ ಇರುವುದರಿಂದ

ಈಗ ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ (1964 ರ ಕರ್ನಾಟಕ ಅಧಿನಿಯಮ 12) 5 ನೇ ಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಮುಂದಿನ ಅಧಿಸೂಚನೆಯನ್ನು ಮಾಡುತ್ತಿದೆ, ಎಂದರೆ:–

ಅನುಸೂಚಿ–1

ಕೋಷ್ಟಕದ (3) ನೇ ಕಾಲಂನಲ್ಲಿ ನಿರ್ದಿಷ್ಟ ಪಡಿಸಿರುವ ಸರ್ವೆ ನಂಬರುಗಳು ಹಾಗೂ ವಿಸ್ತೀರ್ಣದ ಜಮೀನುಗಳನ್ನು ಹೊಂದಿರುವ **ಹಾವೇರಿ** ಜಿಲ್ಲೆಯ **ಹಾನಗಲ್ಲ** ತಾಲ್ಲೂಕಿನ **ನೂರಾನಿ ನಗರ** ಗ್ರಾಮದ ಜನವಸತಿ ಪ್ರದೇಶವೆಂದು ಘೋಷಿಸತಕ್ಕದ್ದು, ಮತ್ತು ಅದನ್ನು **ಬಮ್ಮನಹಳ್ಳಿ** ಕಂದಾಯ ಗ್ರಾಮದ ಸರಹದ್ದಿನೊಳಗೆ ಸಣ್ಣ ವಸತಿ ಸಮೂಹ ವ್ಯಾಪ್ತಿಯನ್ನು ರಚಿಸಲು ಪರಿವರ್ತಿಸತಕ್ಕದ್ದು ಹಾಗೂ ಅದನ್ನು ಇನ್ನು ಮುಂದೆ **ಹಾವೇರಿ** ಜಿಲ್ಲೆಯ **ಹಾನಗಲ್ಲ** ತಾಲ್ಲೂಕಿನ **ನೂರಾನಿ ನಗರ** ಉಪಗ್ರಾಮ ಎಂಬುದಾಗಿ ಹೆಸರಿಸತಕ್ಕದ್ದು,

ಕೋಷ್ಟಕ–1

ದಾಖಲಾಗದಜನವಸತಿ ಇರುವಕಂದಾಯ ಗ್ರಾಮ/ ಗ್ರಾಮಗಳ ಹೆಸರು	ದಾಖಲಾಗದಜನವಸತಿಯ ಈಗಿನಹೆಸರು	ಸರ್ವೆ ನಂಬರುಗಳು	ಒಟ್ಟು ವ್ಯಾಪ್ತಿ			ಸರಹದ್ದುಗಳು			
			(4)			(5)			
			ಎಕರೆ	ಗುಂಟೆ	ಆಣೆ	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
(1)	(2)	(3)							
ಬಮ್ಮನಹಳ್ಳಿ	ನೂರಾನಿ ನಗರ	71/*	6	27	–	ರಿಸನಂ 71 ಉಳಿದಜಾಗ	ರಿಸನಂ73&ಗ್ರಾಮಠಾಣಾ	ರಿಸನಂ73 &72	ರಸ್ತೆ&ಗ್ರಾಮಠಾಣಾ
ಜನವಸತಿ ಪ್ರದೇಶದ ಒಟ್ಟು ವಿಸ್ತೀರ್ಣ			6	27	–				

(3) ನೇ ಕಾಲಂನಲ್ಲಿ ನಿರ್ದಿಷ್ಟಪಡಿಸಿದ ಸರ್ವೆ ನಂಬರುಗಳೊಂದಿಗೆ ಮೇಲಿನ (4) ನೇ ಕಾಲಂನಲ್ಲಿ ಸೂಚಿಸಿರುವ ಭೂಮಿಯ ವ್ಯಾಪ್ತಿಯಲ್ಲಿ ಇರುವ ದಾಖಿಲಾಗದ ಜನವಸತಿಯನ್ನು **ಹಾವೇರಿ** ಜಿಲ್ಲೆಯ **ಹಾನಗಲ್ಲ** ತಾಲ್ಲೂಕಿನ ಗ್ರಾಮದ **ಬಮ್ಮನಹಳ್ಳಿ** ಗ್ರಾಮದ **ನೂರಾನಿ ನಗರ** ಸಣ್ಣ ವಸತಿ ಸಮೂಹ ಭಾಗದ ಜನವಸತಿ ಪ್ರದೇಶ(ಗ್ರಾಮಠಾಣಾ) ಎಂಬುದಾಗಿ ಪರಿವರ್ತಿಸಲಾಗಿದೆ ಎಂದು ಈ ಮೂಲಕ ಘೋಷಿಸಿದೆ.

ಅನುಸೂಚಿ–2

ಕೋಷ್ಟಕದ (3) ನೇ ಕಾಲಂನಲ್ಲಿ ನಿರ್ದಿಷ್ಟ ಪಡಿಸಿರುವ ಸರ್ವೆ ನಂಬರುಗಳು ಹಾಗೂ ವಿಸ್ತೀರ್ಣದ ಜಮೀನುಗಳನ್ನು ಹೊಂದಿರುವ **ಹಾವೇರಿ** ಜಿಲ್ಲೆಯ **ಹಾನಗಲ್ಲ** ತಾಲ್ಲೂಕಿನ **ಮಾರಿಕಾಂಬ ನಗರ** ಗ್ರಾಮದ ಜನವಸತಿ ಪ್ರದೇಶವೆಂದು ಘೋಷಿಸತಕ್ಕದ್ದು, ಮತ್ತು ಅದನ್ನು **ಬಮ್ಮನಹಳ್ಳಿ** ಕಂದಾಯ ಗ್ರಾಮದ ಸರಹದ್ದಿನೊಳಗೆ ಸಣ್ಣ ವಸತಿ ಸಮೂಹ ವ್ಯಾಪ್ತಿಯನ್ನು ರಚಿಸಲು ಪರಿವರ್ತಿಸತಕ್ಕದ್ದು ಹಾಗೂ ಅದನ್ನು ಇನ್ನು ಮುಂದೆ **ಹಾವೇರಿ** ಜಿಲ್ಲೆಯ **ಹಾನಗಲ್ಲ** ತಾಲ್ಲೂಕಿನ **ಮಾರಿಕಾಂಬ ನಗರ** ಉಪಗ್ರಾಮ ಎಂಬುದಾಗಿ ಹೆಸರಿಸತಕ್ಕದ್ದು,

ಕೋಷ್ಟಕ–2

ದಾಖಿಲಾಗದಜನವಸತಿಇರುವಕಂದಾಯ ಗ್ರಾಮ/ ಗ್ರಾಮಗಳ ಹೆಸರು	ದಾಖಿಲಾಗದಜನವಸತಿಯ ಈಗಿನ ಹೆಸರು	ಸರ್ವೆ ನಂಬರುಗಳು	ಒಟ್ಟು ವ್ಯಾಪ್ತಿ			ಸರಹದ್ದುಗಳು			
			(4)			(5)			
			ಎಕರೆ	ಗುಂಟೆ	ಆಣೆ	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
(1)	(2)	(3)							
ಬಮ್ಮನಹಳ್ಳಿ	ಮಾರಿಕಾಂಬ ನಗರ	40/*/*	2	28	–	ರಿಸನಂ37 & 42	ರಿಸನಂ39	ರಿಸನಂ39 & 38	ರಿಸನಂ 1
		41/*/*	1	20	–				
		42/*/*	1	28	–				
ಜನವಸತಿ ಪ್ರದೇಶದ ಒಟ್ಟು ವಿಸ್ತೀರ್ಣ			**5**	**36**	–				

(3) ನೇ ಕಾಲಂನಲ್ಲಿ ನಿರ್ದಿಷ್ಟಪಡಿಸಿದ ಸರ್ವೆ ನಂಬರುಗಳೊಂದಿಗೆ ಮೇಲಿನ (4) ನೇ ಕಾಲಂನಲ್ಲಿ ಸೂಚಿಸಿರುವ ಭೂಮಿಯ ವ್ಯಾಪ್ತಿಯಲ್ಲಿ ಇರುವ ದಾಖಿಲಾಗದ ಜನವಸತಿಯನ್ನು **ಹಾವೇರಿ** ಜಿಲ್ಲೆಯ **ಹಾನಗಲ್ಲ** ತಾಲ್ಲೂಕಿನ ಗ್ರಾಮದ **ಬಮ್ಮನಹಳ್ಳಿ** ಗ್ರಾಮದ **ಮಾರಿಕಾಂಬ ನಗರ** ಸಣ್ಣ ವಸತಿ ಸಮೂಹ ಭಾಗದ ಜನವಸತಿ ಪ್ರದೇಶ(ಗ್ರಾಮಠಾಣಾ) ಎಂಬುದಾಗಿ ಪರಿವರ್ತಿಸಲಾಗಿದೆ ಎಂದು ಈ ಮೂಲಕ ಘೋಷಿಸಿದೆ.

ಮೇಲೆ ನಿರ್ದಿಷ್ಟಪಡಿಸಿದ ಪ್ರಸ್ತಾವನೆಯು, ಕರ್ನಾಟಕ ಭೂಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 12) 5ನೇ ಪ್ರಕರಣದಡಿ ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟವಾದ ಅಂತಿಮ ಅಧಿಸೂಚನೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಾರುತಿ ಎಂ.ಪಿ)
ನಿರ್ದೇಶಕರು,
ಕಂದಾಯ ಗ್ರಾಮಗಳ ರಚನಾ ಕೋಶ
ಹಾಗೂ ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ
ಕಂದಾಯ ಇಲಾಖೆ.

PR-1761

GOVERNMENT OF KARNATAKA

No.:RC-CFS0ADMN/29/2025
E- 1779505

Karnataka Government Secretariat
Multi Storied Building
Bengaluru-560001
Date:17-11-2025

FINAL NOTIFICATION

Whereas the draft of the Notification **No.:RC-CFS0ADMN/29/2025 Dated: 05-07-2025** regarding altering the limits of **Kadaganchi** village of **Aland** Taluk and **Kalaburagi** District and constituting a new revenue village called **Dharamwadi and Basavantwadi** was published as required by section 6 of the Karnataka Land Revenue Act, 1964 (Karnataka act No.12 of 1964) in the Karnataka Gazette **Dated: 10-07-2025** inviting objections or suggestions from all the persons likely to be affected thereby within thirty days from the date of its publication in the Official Gazette addressed to the Deputy Commissioner **Kalaburagi** district.

And whereas, the said gazette was made available to the public on **Dated: 15-07-2025;** And whereas, no objections and suggestions have been received;

Now, therefore, in exercise of the powers conferred by section 5 of Karnataka Land Revenue Act, 1964 (Karnataka act No.12 of 1964) the Government of Karnataka here by makes the following notification, namely:-

SCHEDULE – 1

Lands bearing survey numbers of the villages and survey numbers of the areas specified in column (2) of the table below shall be excluded from the limits of the said village **Kadaganchi** of **Aland** Taluk and **Kalaburagi** District to form a new revenue village called as **Dharamwadi** of **Aland** Taluk in **Kalaburagi** District along with the survey numbers included in column (4) thereof.

TABLE-1

Sl.No.	Old Survey Numbers Which are excluded from **Kadaganchi** village to constituting new village **Dharamwadi**	Extent of area transferred to new village **Dharamwadi**			Survey numbers Specified in column (2) which are to be included to form new village **Dharamwadi** & new survey numbers assigned to them
		Acre	Gunta	Anna	
(1)	(2)	(3)			(4)
1	278 278	13 3	10 0	00 00	1 New Gramathana
2	279	13	16	00	2
3	280	6	37	00	3
4	281	7	22	00	4
5	282 282	3 1	35 4	00	5 New Gramathana

6	283	7	13	00	6
7	284	0	15	00	7
8	285	3	0	00	8
9	286	4	35	00	9
10	287	2	28	00	10
11	288	24	36	00	11
12	289	17	31	00	12
13	290	19	22	00	13
14	291	15	5	00	14
15	292	2	24	00	15
16	293	6	10	00	16
17	294	36	37	00	17
18	295	18	23	00	18
19	296	11	32	00	19
20	297	2	24	00	20
21	298	1	09	00	21
22	299	24	5	00	22
23	300	15	25	00	23
24	301	33	34	00	24
25	302	31	13	00	25
26	303	30	39	00	26
27	304	25	38	00	27
28	305	15	39	00	28
29	306	26	18	00	29
30	307	19	20	00	30
31	308	23	22	00	31
32	309	34	26	00	32
33	310	25	32	00	33
34	311	21	27	00	34
35	312	23	16	00	35
36	313	37	17	00	36
37	314	28	25	00	37
38	315	22	4	00	38
39	316	19	39	00	39
40	317	29	23	00	40
41	318	5	14	00	41
42	319	2	5	00	42
43	320	1	34	00	43

44	321	22	20	00	44
45	322 322	11 5	6 15	00	45 New Gramathana
46	324	37	20	00	46
47	325	11	6	00	47
48	326	18	3	00	48
49	327	7	25	00	49
50	328	30	25	00	50
51	273	37	26	00	51
52	329	22	39	00	52
53	330	3	16	00	53
54	331	11	15	00	54
55	332	24	10	00	55
56	333	41	31	00	56
57	334	12	8	00	57
58	335	24	18	00	58
59	336	34	26	00	59
60	337	14	29	00	60
61	338	12	2	00	61
62	339	30	10	00	62
63	341	30	14	00	63
64	342	14	26	00	64
65	343	34	27	00	65
66	344	29	5	00	66
67	345	30	12	00	67
68	346	13	35	00	68
69	347	16	27	00	69
70	348	8	32	00	70
71	349	16	19	00	71
72	350	13	24	00	72
73	351	25	0	00	73
74	352	18	14	00	74
75	353	19	24	00	75
76	354	29	22	00	76
77	355	28	23	00	77
78	356	24	2	00	78
79	357	26	22	00	79
80	358	15	20	00	80
81	359	19	38	00	81
82	360	21	14	00	82
83	361	13	1	00	83
84	362	18	33	00	84

85	363	19	10	00	85
86	364	24	34	00	86
87	365	27	25	00	87
88	366	0	15	00	88
89	367	0	20	00	89
90	368	17	0	00	90
91	369	2	26	00	91
92	370	2	37	00	92
93	371	7	34	00	93
94	340	28	20	00	94
95	270	24	18	00	95
96	272	13	2	00	96
97	271	12	3	00	97
98	269	17	3	00	98
99	274	38	12	00	99
100	268	40	13	00	100
101	275	7	35	00	101
102	276	17	22	00	102
103	267	31	12	00	103
104	265	22	23	00	104
105	266	11	16	00	105
106	277	22	24	00	106
107	223	22	27	00	107
	TOTAL	**2014**	**37**	**00**	
	GRAMA THANA	**07**	**05**	**00**	
	MARG	**11**	**12**	**00**	
	TOTAL EXTENT	**2033**	**14**	**00**	

Note: The extent of Gramatana within the said village is to be the extent specified below namely:

Survey numbers	Extent
278(part of old sy no)	03 acre 0 Gunta
282(part of old sy no)	01 acre 4 Gunta
322(part of old sy no)	05 acre 15 Gunta

There shall be constituted a new village called **Dharamwadi** in **Aland** taluk, **Kalaburagi** District and boundaries of the village shall be as specified below:-

